ಡಾಕ್ಟರ್ ಆಪರೇಷನ್ ಆಗುವ ಸಾಧ್ಯತೆ ಇದೆಯೆಂದು ಹೇಳಿ, ಯಾವುದೇ ಕಾರಣಕ್ಕು ಒತ್ತಡಕ್ಕೆ ಒಳಗಾಗದೆ ವಿಶ್ರಾಂತಿ ತೆಗೆದುಕೊಳ್ಳಲು ಹೇಳಿದರು. ನಿರ್ವಾಹವಿಲ್ಲದೆ ಖಾನಾವಳಿ ಮುಚ್ಚುವ ಪರಿಸ್ಥಿತಿ ಬಂದು ಬಿಟ್ಟಿತು.

ಕೆಲಸಕ್ಕೆ ಸೇರಿ ವರ್ಷದ ಮೇಲಾಗಿದ್ದರೂ ರಜೆ ಎಂದರೆ ಏನು ಎಂಬುದು ಗೊತ್ತಿಲ್ಲದಂತೆ ಮಾದೇವ ಖಾನಾವಳಿಯಲ್ಲಿ ಹಗಲಿರುಳು ದುಡಿದಿದ್ದ. ಈಗ ಖಾನಾವಳಿ ಮುಚ್ಚಿದರೆ ಮುಂದೇನು ಮಾಡುವುದೆಂದು ತಿಳಿಯದೇ ವ್ಯಾಕುಲಗೊಂಡಿದ್ದ. ಧರೆಪ್ಪ ಎಲ್ಲ ಕೆಲಸದಾಳುಗಳಿಗೆ ಕರೆದು ಬೇರೆ ಎಲ್ಲಿಯಾದರೂ ಕೆಲಸ ನೋಡಿಕೊಳ್ಳಲು ಹೇಳಿ, ಅವರಿಗೆ ಸಂಬಳವನ್ನು ನೀಡಿದ. ತಲೆತಲಾಂತರದಿಂದ ಅನ್ನ ನೀಡಿದ ಈ ಲಿಂಗಾಯತ ಖಾನಾವಳಿ ಇನ್ನುಂದೆ ಇರುವುದಿಲ್ಲವೆಂಬುದನ್ನು ಅವನಿಗೆ ಸುಲಭವಾಗಿ ಅರಗಿಸಿಕೊಳ್ಳುವ ವಿಷಯವಾಗಿರಲಿಲ್ಲ. ಒಂದು ಕಡೆ ಆರೋಗ್ಯದ ಸಮಸ್ಯೆಯಾದರೆ, ಇನ್ನೊಂದೆಡೆಗೆ ಅಕ್ಕಪಕ್ಕದಲ್ಲೆಲ್ಲ ದೊಡ್ಡ ದೊಡ್ಡ ಹೊಟೇಲ್ ಮತ್ತು ರೆಸ್ಟೋರೆಂಟ್‌ಗಳು ಹೊಸದಾಗಿ ತಲೆ ಎತ್ತುತ್ತಿದ್ದವು. ಇತ್ತೀಚೆಗಂತೂ ಖಾನಾವಳಿಗೆ ಗಿರಾಕಿಗಳು ಆಗೊಬ್ಬರು ಈಗೊಬ್ಬರು ಬರುತ್ತಿದ್ದರು. ಒಂದೊಂದು ಸಲ ಕೆಲಸಗಾರರಿಗೆ ಸಂಬಳ ಕೊಡಲು ಹಣವಿರುತ್ತಿರಲಿಲ್ಲ. ಒಳ್ಳೆಯ ರೇಟ್ ಬಂದರೆ ಖಾನಾವಳಿ ಮಾರಿಬಿಡುವುದಾಗಿ ಧರೆಪ್ಪ ಯೋಚಿಸಿದ್ದ.

ಮಾದೇವನ ನಿಸ್ವಾರ್ಥ ಸೇವೆಗೆ ಮೆಚ್ಚಿ ತುಸು ಹೆಚ್ಚೇ ಎನ್ನುವಂತೆ ಸಂಬಳ ನೀಡಿ ಮನಸಲ್ಲಿ ನೋವಿದ್ದರೂ ನಗುತ್ತ ಧರೆಪ್ಪ ಅವನ ಬೆನ್ನ ಮೇಲೆ ಕೈಯಾಡಿಸಿದ. ಗೊತ್ತಿಲ್ಲದಂತೆ ಇಬ್ಬರ ನಡುವೆ ಬೆಳೆದಿದ್ದ ಭಾವನಾತ್ಮಕ ಎಳೆ ಸಂಬಂಧಗಳ ಎಲ್ಲೆಯನ್ನು ಮೀರಿತ್ತು. ಉಳಿದ ಕೆಲಸಗಾರರು ಸುಖಾಸುಮ್ಮನೆ ಮಾದೇವನ ಮೇಲೆ ಫಿರ್ಯಾದಿಗಳನ್ನು ಹೇಳಿ ಇಬ್ಬರ ನಡುವೆ ಹುಳಿ ಹಿಂಡುವಾಗಲೂ ಧರೆಪ್ಪ ಅವನನ್ನು ಎಂದೂ ಬಿಟ್ಟು ಕೊಟ್ಟಿರಲಿಲ್ಲ. ನಡುರಾತ್ರಿಯಲ್ಲಿ ಎಚ್ಚರಿಸಿ ಈ ಕೆಲಸ ಮಾಡು ಎಂದರೆ ಅಷ್ಟೇ ಶ್ರದ್ಧೆಯಿಂದ ಮಾಡುವ ಅವನ ಬಗ್ಗೆ ಕಾಳಜಿಯಿದ್ದರೂ ಯಾವಾಗಲೂ ಅವನ ಮೇಲೆ ಸಿಡುಕು-ಪಡಕು ಮಾಡುತ್ತಿದ್ದ. ಖಾನಾವಳಿಯ ಚಾವಿ ಮಾದೇವನ ಕೈಯಲ್ಲಿ ಕೊಟ್ಟು ಕಸ ಉಡುಗಿ, ಎಲ್ಲಾ ದೂಳನ್ನು ಜಾಡಿಸಲು ಹೇಳಿದ. ಇಷ್ಟು ದಿನ ಆಶ್ರಯ ನೀಡಿ ಅನ್ನ ಹಾಕಿದ ಧರೆಪ್ಪ ಕಾಕಾನ ಖಾನಾವಳಿಯ ಋಣಾನುಬಂಧ ಇನ್ನೇನೂ ಮುಗಿಯಲು ಬಂತೆಂದು ಮಾದೇವ ದುಃಖಿತನಾಗಿದ. ನಂತರದಲ್ಲಿ ಖಾನಾವಳಿಯಲ್ಲಿಯ ಕಸ ಗುಡಿಸಿ, ಕುರ್ಚಿ ಟೇಬಲ್‌ಗಳನ್ನು ತೊಳೆದು, ಗೋಡೆಗೆ ತಗುಲಿ ಹಾಕಿದ ಎಲ್ಲಹಳೆಯಪೋಸ್ಟರ್‌ಗಳನ್ನುತೆಗೆದ.ಎರಡುದಿನಬಿಟ್ಟು ಚಾವಿ ಕೊಡಲು ಧರೆಪ್ಪನ ಮನೆಗೆ ಹೋದಾಗ ಅವನು ಬೆಂಗಳೂರಿಗೆ ಆಸ್ಪತ್ರೆಗೆ ಹೋಗಿರುವುದು ತಿಳಿಯಿತು. ಈ ಊರಿನ ನಂಟು ತೊರೆದು ಮುಂದಿನೂರಿಗೆ ಹೋಗಿ ಬಿಡಬೇಕು ಎಂದವನಿಗೆ ಒಂದೇ ಒಂದು ಸಲ ಧರೆಪ್ಪ ಕಾಕಾನಿಗೆ ನೋಡಿ ಹೋಗಬೇಕೆಂದು ಗಟ್ಟಿ ಧೈರ್ಯ ಮಾಡಿ ಉಳಿದುಕೊಂಡ. ಚಾವಿ ಅವನ ಬಳಿಯಲ್ಲೇ ಇರುವುದರಿಂದ ದಿನಾಲು ಖಾನಾವಳಿಗೆ ಬಂದು ಕುಂಟುತ್ತಿದ್ದ ಕುರ್ಚಿ, ಟೇಬಲ್ ಕಾಲುಗಳಿಗೆ ಮೊಳೆ ಹೊಡೆಯುವುದು, ಗೋಡೆಗೆ ಬಣ್ಣ ಬಳೆಯುವುದು, ಹೀಗೆ ತನಗೆ ಅನಿಸಿದ್ದೆಲ್ಲವನ್ನು ಮಾಡುತ್ತ ಕಾಲ ಕಳೆಯತೊಡಗಿದ. ಅವನ ಬಳಿಯಲ್ಲಿಯ ಹಣವನ್ನೇ ಬಳಸುತ್ತಿದ್ದರಿಂದ ದಿನೇ ದಿನೇ ಕೈಖಾಲಿಯಾಗುತ್ತ ಬಂತು. ಒಂದು ತಿಂಗಳ ಕಾಲ ನಿರಂತರ ಖಾನಾವಳಿಯಲ್ಲಿ ಒಂದಿಲ್ಲೊಂದು ಕೆಲಸದಲ್ಲಿ ತೊಡಗಿಸಿಕೊಂಡ. ಮಾಡಲು ಏನೂ ಕೆಲಸ ಇಲ್ಲದಂತಾಗಿ ಅವನ ದಿನಚರಿ ಏಕಾಏಕಿ ತಪ್ಪಿ ಒಂಟಿತನ ಕಾಡಲು ಶುರುವಾಯಿತು. ಬೇರೆ ಕಡೆಗೆ ಹೋಗಿ ಕೆಲಸ ಕೇಳಲು ಅವನ ಮನಸ್ಸು ಒಪ್ಪಲಿಲ್ಲ.

ಧರೆಪ್ಪ ಹಾರ್ಟ್ ಆಪರೇಷನ್ ಮಾಡಿಸಿಕೊಂಡು ಎರಡು ತಿಂಗಳ ಮೇಲಾಗಿತ್ತು. ಅವತ್ತು ಖಾನಾವಳಿ ಕಡೆಗೆ ಬಂದವನಿಗೆ ಅಚ್ಚರಿ ಕಾದಿತ್ತು. ಖಾನಾವಳಿ ಮುಂದಿನ ಗಟಾರ ಮೇಲೆ ಪರಸಿಗಳನ್ನು ಇರಿಸಿ, ಖಾನವಾಳಿಯ ಮೇಲೆ ಜೋತು ಬಿದ್ದಿದ್ದ ಬೇವಿನ ಮರದ ಟೊಂಗೆಗಳನ್ನು ಮಾದೇವ ಕತ್ತರಿಸಿದ್ದ. ಚಾವಿ ತೆರೆದು ಒಳಗೆ ಹೋದಾಗ ಧರೆಪ್ಪನಿಗೆ ಮತ್ತಷ್ಟು ಅಚ್ಚರಿ ಕಾದಿತ್ತು. ಎಲ್ಲ ಕುರ್ಚಿ ಟೇಬಲ್‌ಗಳನ್ನು ಹೊಂದಿಸಿ, 'ಲಿಂಗಾಯತ ಖಾನಾವಳಿ, ಊಟ ತಯಾರಿದೆ' ಎಂಬ ಬೋರ್ಡ್ ಮೇಲೆ ಎದ್ದು ಕಾಣುವಂತೆ ಬಣ್ಣ ಬಳೆದು ಇಡೀ ಖಾನಾವಳಿಗೆ ಹೊಸ ಕಾಯಕಲ್ಪ ನೀಡಿದ್ದ. ಕಾಕಾ ಏನಾದರೂ ಬೈಯುತ್ತಾನೋ ಎಂಬ ಅಳುಕಿನಲ್ಲಿದ್ದ ಅವನಿಗೆ ಧರೆಪ್ಪ ಕೃತಜ್ಞತೆಯ ನೋಟ ಬೀರಿ 'ಏನೋ ಮಾದ್ಯಾ ಇದೆಲ್ಲ... ಹುಚ್ಚರಾಟ... ನಿನ್ನ ಕೈಯಾಗಿನ